**1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಟಿ.ನರಸೀಪುರ**

**ಸಿ.ಸಿ ಸಂಖ್ಯೆ : 840/2026**

**ಪಿರ್ಯಾದಿ** : ರಾಜ್ಯದ ಪರವಾಗಿ ತಲಕಾಡು ಪೋಲೀಸ್ ಠಾಣೆ,

**ವಿರುದ್ಧ**

**ಆರೋಪಿಗಳು** : ಶಿವರಾಜು ಬಿನ್ ನಂಜಪ್ಪ, 24 ವರ್ಷ,
ವಾಸಃ ಹಿರಿಯೂರು ಗ್ರಾಮ,
ಟಿ.ನರಸೀಪುರ ತಾಲ್ಲೂಕು.

**ಆಪಾದನೆ**

**ಶ್ರೀಮತಿ ನಿವೇದಿತಾ ಎನ್. 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ಆಪಾದನೆ ಏನೆಂದರೆ,**

ದಿಃ 03/03/2026 ರಂದು ಸಂಜೆ 5.00 ಗಂಟೆಯಲ್ಲಿ ತಲಕಾಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಮೇದಿನಿ ಗ್ರಾಮದ ಕಾವೇರಿ ನದಿ ತೀರದಲ್ಲಿರುವ ಸಾರ್ವಜನಿಕ ಸ್ಥಳವಾದ ರಾಮನಕಟ್ಟೆಯ ಬಳಿ, ಆರೋಪಿಯಾದ ನೀವು ಗಾಂಜಾ ಸೇವನೆ ಮಾಡಿ ಅಮಲಿನಲ್ಲಿರುವಂತೆ ಕಂಡು ಬಂದ ಮೇರೆಗೆ ನಿಮ್ಮನ್ನು ಶೋಧನೆ ಮಾಡಲಾಗಿ ಗಾಂಜಾ ಸೇವಿಸಿ ಅಮಲಿನಲ್ಲಿರುವುದು ಕಂಡು ಬಂದಿದ್ದು, ಆ ಮೂಲಕ ಆರೋಪಿಯಾದ ನೀವು ಎನ್.ಡಿ.ಪಿ.ಎಸ್ ಕಾಯ್ದೆ ಕಲಂ 27(**ಬಿ**) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಪ್ರಶ್ನೆಃ ಈಗ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕಾ?

ಉತ್ತರಃ

(ಈ ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನಾನು ನನ್ನ ಸ್ವಂತ ಬರಹದಲ್ಲಿ ದಾಖಲು ಮಾಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

ದಿಃ 17/03/2026

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**

ಪ್ರಕರಣವನ್ನು ಕರೆಯಲಾಯಿತು. ಆರೋಪಿಯು ಹಾಜರಿದ್ದು ದೋಷಾರೋಪಣಾ ಪತ್ರವನ್ನು ಒದಗಿಸಲಾಯಿತು. ಆರೋಪಣೆಯನ್ನು ಆರೋಪಿಗೆ ಓದಿ ಹೇಳಲಾಗಿ, ಅರ್ಥೈಸಿಕೊಂಡು ತಮ್ಮ ತಪ್ಪನ್ನು ಒಪ್ಪಿಕೊಂಡಿರುಸತ್ತಾರೆ. ಅವರ ತಪ್ಪೊಪ್ಪಿಗೆಯು ಸ್ವ-ಇಚ್ಛೆಯಿಂದ ಕೂಡಿದ್ದೆಂದು ಮನವರಿಕೆಯಾಗಿದೆ.

ಆದ್ದರಿಂದ ಭಾರತೀಯ ನ್ಯಾಯ ಸಂಹಿತೆ ಕಲಂ.27(**b**) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ ಆರೋಪಿಗೆ ಶಿಕ್ಷೆ ವಿಧಿಸಿದ್ದು ರೂ.5,000/- ದಂಡವನ್ನು ಪಾವತಿಸತಕ್ಕದ್ದು ಎಂದು ಆದೇಶಿಸಿರುತ್ತೇನೆ.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**